

ಆ ಕತೆಯ ಪಾತ್ರ ನಾನೇ ಅಂತ ಖಚಿತವಾಗಿ ಗೊತ್ತಾಗಿದ್ದು ನನಗೆ ಮಾತ್ರ.

ನನಗೆ ಹಳೆ ಸ್ನೇಹಿತರೇ ಕಮ್ಮಿ, ಅದರಲ್ಲೂ ಕತೆಗಿತೆ ಓದುವ ಮಂದಿ ಒಂದಿಬ್ಬರೂ ಇರಲಿಕ್ಕಿಲ್ಲ. ಹಾಗಾಗಿ ಅವನು ಬರೆದ ಆ ಕತೆಯನ್ನು ಯಾರೋ ಓದಿ, ಆ ಪಾತ್ರ ನಾನೇ ಅಂತ ಕಂಡುಹಿಡಿದು, ಹಿಡಿದು ನೇಣು ಹಾಕುವ ಸಾಧ್ಯತೆಯೇ ಇರಲಿಲ್ಲ. ಆದರೂ ಆ ಕತೆಯಲ್ಲಿ ನಾನು ಇದ್ದೇನೆ ಅನ್ನುವ ಒಂದು ವಿಷಯ ಅದೆಷ್ಟು ನನ್ನನ್ನು ಕಾಡಿತೆಂದರೆ ನನ್ನ ಹಲವು ವರ್ಷಗಳ ನೆಮ್ಮದಿ, ನನ್ನ ನಿರಾಳತೆಯನ್ನು ಅದು ಕದಡಿ ಹಾಕಿತು. ವಿಶ್ವಜಿತನ ಆ ಕಥಾಸಂಕಲನದ ಬಿಡುಗಡೆಗೆ ನಾನು ಹೋಗಿರಲಿಲ್ಲ, ಆ ಕಾರ್ಯಕ್ರಮಕ್ಕೆ ಹೋಗಿದ್ದವನು ನನ್ನ ಇನ್ನೊಬ್ಬ ಸ್ನೇಹಿತ ಶಿವಕುಮಾರ. ಅದು ತಪ್ಪಿಸಬಾರದಂಥ ಕಾರ್ಯಕ್ರಮವೇನೂ ಆಗಿರಲಿಲ್ಲ ಅಂತ ಶಿವಕುಮಾರನೇ ಫೋನ್ ಮಾಡಿ ಹೇಳಿದ, ನಾಲ್ಕಾರು ದಿನ ಕಳೆದ ಮೇಲೆ ವಿಶ್ವಜಿತ್ ಫೋನ್ ಮಾಡಿ, ಬರಲೇ ಇಲ್ಲ ಅಂತ ದೂರಿ, ನಿನಗೆ ಪುಸ್ತಕ ಕಳಿಸಿ ಕೊಡುತ್ತೇನೆ, ಅಗತ್ಯವಾಗಿ ಓದಲೇಬೇಕು ಅಂತ ಹೇಳಿದ. ಆಡಿದ ಮಾತಿನಂತೆ ಅವನ ಪುಸ್ತಕ ಕೂಡ ನನ್ನ ಆಫೀಸಿನ ವಿಳಾಸಕ್ಕೆ ಬಂತು. ಬೇರೇನೋ ಕೆಲಸದಲ್ಲಿ ನಿರತನಾಗಿದ್ದ ನಾನು ಆ ಸಂಕಲನವನ್ನು ಓದದೇ ಬೀರುವಲ್ಲಿ ಇಟ್ಟುಬಿಟ್ಟಿದ್ದೆ. ಕತೆ ಓದಿದೆಯಾ ಅಂತ ಒಂದೆರಡು ಸಲ ಮೆಸೇಜು ಹಾಕಿದ.